**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ | 07 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು) |
| 3) | ಉತ್ತರಿಸಬೇಕಾದ ದಿನಾಂಕ | 08.12.2025 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಡಾ\|\| ನಂಜುಂಡಪ್ಪ ಆಯೋಗದ ವರದಿಯ ಫ್ಲೋಮ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕು ಆಗಿದ್ದು, ಸದರಿ ತಾಲ್ಲೂಕಿನಲ್ಲಿ ಎಷ್ಟು ಸರ್ಕಾರಿ ಐಟಿಐ ಮತ್ತು ಡಿಪ್ಲೊಮೊ ಕಾಲೇಜುಗಳಿವೆ: | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಿಂದ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೋರನ ಕಣಿವೆ ಇಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.<br><br>**ಉನ್ನತ ಶಿಕ್ಷಣ ಇಲಾಖೆ**<br>ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಪ್ರಸ್ತುತ ಯಾವುದೇ ಸರ್ಕಾರಿ ಡಿಪ್ಲೋಮಾ ಕಾಲೇಜುಗಳು ಕಾರ್ಯನಿರ್ವಹಿಸುತ್ತಿಲ್ಲ. |
| (ಆ) ನಗರಕ್ಕೆ ಸರ್ಕಾರಿ ಉಪಕರಣಗಾರ ಕಾಲೇಜಿನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| (ಇ) ಡಿಪ್ಲೊಮೊ ಪದವಿ ಪಡೆಯಲು ಈ ತಾಲ್ಲೂಕಿನ ಯುವಕರು ಇತರೆ ತಾಲ್ಲೂಕಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಲ್ಲಿಯವರೆಗೆ ಜಿಟಿಟಿಸಿ ಕಾಲೇಜನ್ನು ಚಿಕ್ಕನಾಯಕನಹಳ್ಳಿಗೆ ನೀಡದಿರಲು ಕಾರಣವೇನು? | ತುಮಕೂರು ಜಿಲ್ಲೆಯ ಹೀರೆಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಈಗಾಗಲೇ ಜಿಟಿಟಿಸಿ ತರಬೇತಿ ಕೇಂದ್ರ ಸ್ಥಾಪಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿ ನೂತನ ಜಿಟಿಟಿಸಿ ಕೇಂದ್ರ ಸ್ಥಾಪಿಸಲು ಅನುಮೋದನೆ ನೀಡಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯ ಹಂತದಲ್ಲಿದೆ.<br><br>ಚಿಕ್ಕನಾಯಕನಹಳ್ಳಿಯಲ್ಲಿ ನೂತನ ಜಿಟಿಟಿಸಿ ತರಬೇತಿ ಕೇಂದ್ರವನ್ನು ಸ್ಥಾಪನೆ ಮಾಡಲು ಅನುದಾನದ ಅವಶ್ಯಕತೆಯಿದ್ದು, ಪ್ರಸಕ್ತ ಸಾಲಿನಲ್ಲಿ ಯಾವುದೇ ಅನುದಾನ ಒದಗಿಸಿರುವುದಿಲ್ಲ.<br><br>**ಉನ್ನತ ಶಿಕ್ಷಣ ಇಲಾಖೆ**<br>ಸರ್ಕಾರದ ಆದೇಶ ಸಂಖ್ಯೆ:ಇಡಿ 01 ಹೆಚ್‌ಪಿಟಿ 2024, ದಿನಾಂಕ:11-07-2024ರಲ್ಲಿ ರಾಜ್ಯದಲ್ಲಿ ನೂತನವಾಗಿ ಸರ್ಕಾರಿ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸುವ ಕುರಿತು ಪರಿಶೀಲಿಸಿ ವರದಿ ಪಡೆಯಲು ಅಧಿಕಾರಿಗಳ ಸಮಿತಿ ರಚಿಸಿ |

| | |
|---|---|
| | ಆದೇಶಿಸಲಾಗಿದೆ. ಸದರಿ ಸಮಿತಿಯ ವರದಿಯನ್ನಾಧರಿಸಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲಾಗುವುದು. |
| (ಈ) ಸದರಿ ತಾಲ್ಲೂಕಿನಲ್ಲಿ ಕಳೆದ 5 ವರ್ಷಗಳಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಮುಖಾಂತರ ಯಾವ ಯಾವ ಕಾರ್ಯಕ್ರಮಗಳನ್ನು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ; ಇಲ್ಲಿಯವರೆಗೆ ಎಷ್ಟು ಅನುದಾನವನ್ನು ಇಲಾಖೆಯ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗಿದೆ? (ಸಂಪೂರ್ಣ ವಿವರಗಳನ್ನು ನೀಡುವುದು) | **<u>ಕೈಗಾರಿಕಾ ಮತ್ತು ಉದ್ಯೋಗ ಇಲಾಖೆ</u>**<br>ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಮುಖಾಂತರ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕೈಗೊಳ್ಳಲಾದ ಕಾರ್ಯಕ್ರಮಗಳು/ಯೋಜನೆಗಳು ಈ ಕೆಳಗಿನಂತಿವೆ:<br>• ಕುಶಲಕರ್ಮಿ ತರಬೇತಿ ಯೋಜನೆ<br>• ಅಪ್ರೆಂಟೀಸ್ ಶಿಪ್ ಟ್ರೈನಿಂಗ್ ಯೋಜನೆ.<br>• ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ<br>• PM Suryaghar Mufth Bijili ಯೋಜನೆ.<br>• PM Vishwakarma<br>• Nal Jal Mithra program<br>• ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೋರನಕಣಿವೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು Karnataka Mining Environment Restoration Corporation (KMERC) ಇವರ Comprehensive Environment Plan for Mining Impact Zone (CEPMIZ) ಯೋಜನೆ ಅಡಿಯಲ್ಲಿ ಕಟ್ಟಡ ಹಾಗೂ ಯಂತ್ರೋಪಕರಣಗಳನ್ನು ನೀಡಿ ಉನ್ನತೀಕರಿಸಲು ರೂ.1432.07 ಲಕ್ಷಗಳ ಅನುದಾನ ಮಂಜೂರಾಗಿದ್ದು, ಪ್ರಸ್ತುತ ಕಟ್ಟಡ ಕಾಮಗಾರಿಯು ಪ್ರಗತಿಯಲ್ಲಿದ್ದು, ಈವರೆಗೆ ರೂ.512.13 ಲಕ್ಷಗಳನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದೆ. ಯೋಜನೆಗಳ ಸಂಪೂರ್ಣ ವಿವರವನ್ನು ಅನುಬಂಧ -1 ರಲ್ಲಿ ನೀಡಿದೆ.<br><br>**<u>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)</u>**<br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಕಳೆದ 5 ವರ್ಷಗಳಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಹಮ್ಮಿಕೊಳ್ಳಲಾದ ಯೋಜನೆಗಳು ಈ ಕೆಳಕಂಡಂತಿವೆ:<br><br><u>ರಾಜ್ಯ ಸರ್ಕಾರದ ಯೋಜನೆ / ಕಾರ್ಯಕ್ರಮಗಳು :</u><br>1. ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ:<br>• ಯುವನಿಧಿ ಪ್ಲಸ್ ಕಾರ್ಯಕ್ರಮ<br>• ILC & Future Skills ಕಾರ್ಯಕ್ರಮ<br>• ಕಲಿಕೆ ಜೊತೆ ಕೌಶಲ್ಯ ಕಾರ್ಯಕ್ರಮ<br>• ನನ್ನ ವೃತ್ತಿ ನನ್ನ ಆಯ್ಕೆ ಕಾರ್ಯಕ್ರಮ<br>• ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ<br>• ಆಶಾ ದೀಪ ಯೋಜನೆ |

- ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ಕಾರ್ಯಕ್ರಮ.
- ಸ್ತ್ರೀ ಶಕ್ತಿ ಯೋಜನೆ
- PMAJAY ಯೋಜನೆ
- Skill on Wheels ಯೋಜನೆ

**<u>ಕೇಂದ್ರ ಸರ್ಕಾರದ ಯೋಜನೆ / ಕಾರ್ಯಕ್ರಮಗಳು :</u>**

1. ಸಂಕಲ್ಪ (SANKALP) (Skill Acquisition and Knowledge Awareness for Livelihood promotion) ಕಾರ್ಯಕ್ರಮ
2. ನಲ್ ಜಲ್ ಮಿತ್ರ ಯೋಜನೆ

ಯೋಜನೆಗಳ ಸಂಪೂರ್ಣ ವಿವರವನ್ನು **ಅನುಬಂಧ**-2 ರಲ್ಲಿ ಮತ್ತು ಅನುದಾನದ ವಿವರವನ್ನು **ಅನುಬಂಧ** – 3 ರಲ್ಲಿ ನೀಡಿದೆ.

**<u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u>**

**<u>ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ / ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)</u>**

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಜೀವಿನಿ-ಕೆಎಸ್ಆರ್ ಎಲ್‌ಪಿಎಸ್ ಮೂಲಕ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಗ್ರಾಮೀಣ ಬಡತನವನ್ನು ಕಡಿಮೆ ಮಾಡುವ ಉದ್ದೇಶದಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಅಭಿಯಾನದಡಿ ಕಳೆದ 5 ವರ್ಷಗಳಿಂದ ತಾಲ್ಲೂಕಿಗೆ ಬಿಡುಗಡೆಯಾಗಿರುವ ಅನುದಾನ ವಿನಿಯೋಗದ ವಿವರ ಈ ಕೆಳಗಿನಂತಿದೆ.

- ಕಳೆದ 5 ವರ್ಷಗಳಲ್ಲಿ ಒಟ್ಟು 1753 ಸ್ವಸಹಾಯ ಗುಂಪುಗಳನ್ನು ರಚನೆಗೊಳಿಸಿ 18575 ಕುಟುಂಬಗಳನ್ನು ಅಭಿಯಾನದ ವ್ಯಾಪ್ತಿಗೆ ತರಲಾಗಿರುತ್ತದೆ. ಸದರಿ ಸ್ವಸಹಾಯ ಗುಂಪುಗಳ ಮಹಿಳೆಯರು ಜೀವನೋಪಾಯ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ಒದಗಿಸುವ ಮೂಲಕ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಅವಶ್ಯಕ ಕೌಶಲ್ಯ ಆಧಾರಿತ ತರಬೇತಿಗಳನ್ನು ಒದಗಿಸಲಾಗುತ್ತಿದೆ.
- ತಾಲ್ಲೂಕಿನಲ್ಲಿ 719 ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ರೂ.646.80 ಲಕ್ಷಗಳಲ್ಲಿ ಸಮುದಾಯ ಬಂಡವಾಳ ನಿಧಿಯನ್ನು ಪ್ರತಿ ಸ್ವ-ಸಹಾಯ ಗುಂಪುಗಳಿಗೆ ತಲಾ ರೂ.1.50 ಲಕ್ಷದಂತೆ ಒದಗಿಸಲಾಗಿದೆ. ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ಆರಂಭಿಕ ಹಂತದಲ್ಲಿ ಉದ್ಯಮ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗುವ ದೃಷ್ಟಿಯಿಂದ ಪ್ರತಿ ಸ್ವಸಹಾಯ ಗುಂಪಿಗೆ

| | |
|---|---|
| | ರೂ.20.000/- ದಂತೆ ಒಟ್ಟು 35 ಸ್ವ-ಸಹಾಯ ಗುಂಪುಗಳಿಗೆ ರೂ.5.25 ಲಕ್ಷ ಸುತ್ತಿನಿಧಿಯನ್ನು ಒದಗಿಸಲಾಗಿದೆ.<br>• ತಾಲ್ಲೂಕಿನಲ್ಲಿ ಸ್ತ್ರೀ ಸಾಮರ್ಥ್ಯ ಯೋಜನೆಯಡಿ 27 ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಿಗೆ ರೂ.244.50 ಲಕ್ಷ ಅನುದಾನವನ್ನು ಉದ್ಯಮ ಚಟುವಟಿಕೆ ಕೈಗೊಳ್ಳಲು ಒದಗಿಸಲಾಗಿದೆ.<br>• ತಾಲ್ಲೂಕಿನ 27 ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಿಗೆ ತಲಾ ರೂ. 1.00 ಲಕ್ಷದಂತೆ ವಿಆರ್‌ಎಫ್ ದುರ್ಬಲ ವರ್ಗದ ನಿಧಿಯನ್ನು ಒದಗಿಸಲಾಗಿದ್ದು, ಇದರಿಂದ 98 ಸ್ವ-ಸಹಾಯ ಗುಂಪುಗಳ 115 ಮಹಿಳೆಯರಿಗೆ ಅನುಕೂಲ ಒದಗಿಸಲಾಗಿದೆ.<br>• ಪಿಎಂ-ಜೆವೈ (SCA-SCSP) ವಿಶೇಷ ಕೇಂದ್ರೀಯ ನೆರವು ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ ಮಹಿಳೆಯರಿಗೆ ಹೈನುಗಾರಿಕೆಯಂತಹ ಉದ್ಯೋಗ ಕೈಗೊಳ್ಳಲು 24 ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಿಗೆ ರೂ.38.07 ಲಕ್ಷ ನಿಧಿ ಒದಗಿಸಲಾಗಿದ್ದು, 387 ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ಅನುಕೂಲ ಒದಗಿಸಲಾಗಿದೆ.<br>• ತಾಲ್ಲೂಕಿನಲ್ಲಿ ಒಂದು ವನಧನ ವಿಕಾಸ ಕೇಂದ್ರ, 3 ಸಮಗ್ರ ಕೃಷಿ ಸಮೂಹಗಳ ಸ್ಥಾಪನೆ, 1 ರೈತ ಉತ್ಪಾದಕ ಮಹಿಳಾ ಕಿಸಾನ್ ಕಂಪನಿ ಸ್ಥಾಪನೆ ಸೇರಿದಂತೆ ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಜೋಡಣೆ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.<br>• ತಾಲ್ಲೂಕಿನಲ್ಲಿ ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಸಿಕ ಸಂತೆಗಳನ್ನು ಆಯೋಜಿಸಲಾಗಿರುತ್ತದೆ.<br>ಒಟ್ಟಾರೆ, ಅಭಿಯಾನದಡಿ ಮಹಿಳೆಯರು ಜೀವನೋಪಾಯ ಚಟುವಟಿಕೆಯೊಂದಿಗೆ ಸ್ವಾವಲಂಬನೆಯ ಬದುಕನ್ನು ನಿರ್ವಹಿಸಲು ಆಹಾರ, ಆರೋಗ್ಯ, ಪೌಷ್ಠಿಕತೆ ಮತ್ತು ನೈರ್ಮಲ್ಯ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ ಮಹಿಳೆಯರು ಸಬಲರಾಗಲು ನಿರಂತರವಾಗಿ ಬೆಂಬಲಿಸಲಾಗುತ್ತಿದೆ. |

ಸಂಖ್ಯೆ: ಕೌಉಜೀಇ 28 ಕೌಗುಪ್ರ 2025

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.

ಅನುಬಂಧ-1

| | PMSGMBY details of Tumkur distict as on 1-12-2025 | | | |
|---|---|---|---|---|
| SL NO | Name of the ITI | NO,OF TRAINEES REGISTERED | NO,OF TRAINEES PASSED CBT | NO,OF TRAINEES COMPLETED OJT |
| 1 | Govt I T I SIRA | 57 | 51 | 57 |
| 2 | GOVT ITI (W) TIPTUR | 60 | 57 | 39 |
| 3 | GOVT ITI Ammasandra | 35 | 35 | 17 |
| 4 | GOVT ITI Koratagere | 87 | 87 | 64 |
| 5 | GOVT ITI KUNIGAL | 82 | 61 | 62 |
| 6 | GOVT ITI MADHUGIRI | 53 | 50 | 53 |
| 7 | GOVT ITI PAVAGADA | 125 | 112 | 112 |
| 8 | GOVT ITI TUMKUR | 99 | 62 | 78 |
| 9 | GOVT ITI TURUVEKERE | 45 | 41 | 30 |
| 10 | Govt ITI. Honnavalli | 56 | 55 | 55 |
| 11 | GOVT ITRI BORANAKANIVE | 36 | 16 | 16 |
| 12 | Govt. ITI, Gubbi | 100 | 100 | 100 |
| | **Grand Total** | **835** | **727** | **683** |

**CMKKY STC details of Tumkur distict**

| SL NO | Name of the ITI | 2021-22 | 2022-23 | 2023-24 | 2024-25 |
|---|---|---|---|---|---|
| 1 | Govt ITI Ammasandra | 18 | 20 | 34 | 29 |
| 2 | Govt ITI for Women Tiptur | 18 | 30 | 137 | 0 |
| 3 | Govt ITI Koratagere | 30 | 18 | 13 | 105 |
| 4 | Govt ITI Kunigal | 38 | 0 | 40 | 16 |
| 5 | Govt ITI Madhugiri | 33 | 18 | 32 | 18 |
| 6 | Govt ITI Turvekere | 19 | 15 | 37 | 62 |
| 7 | Govt ITI Gubbi | 0 | 0 | 60 | 77 |
| 8 | Govt ITI Pavagada | 0 | 0 | 58 | 24 |
| 9 | Govt ITI Tumkur | 0 | 0 | 47 | 21 |
| 10 | Govt ITI Sira | 19 | 46 | 0 | 29 |
| 11 | Govt ITI Boranakanive | 0 | 0 | 0 | 14 |
| 12 | Govt ITI Honnavalli | 0 | 0 | 0 | 24 |
| | **Total** | **175** | **147** | **458** | **419** |

| PMVishwakarma details of Tumkur distict | | | | |
|---|---|---|---|---|
| SL NO | Name of the ITI | Basic Skilling Enrolled | Basic Skilling Passed | Basic Skilling Certified |
| 1 | GOVT ITI Koratagere | 145 | 102 | 102 |
| 2 | GOVT ITI MADHUGIRI | 38 | 31 | 31 |
| 3 | GOVT ITI PAVAGADA | 39 | 27 | 27 |
| 4 | GOVT ITI TUMKUR | 89 | 76 | 76 |
| 5 | Govt ITI. Honnavalli | 481 | 432 | 432 |
| 6 | Govt. ITI, Gubbi | 78 | 55 | 55 |
| | **Grand Total** | **870** | **723** | **723** |

(ಪದ್ಮ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

## ಅನುಬಂಧ-2

## ಯೋಜನೆಗಳ ವಿವರ:

### ರಾಜ್ಯ ಸರ್ಕಾರದ ಯೋಜನೆ / ಕಾರ್ಯಕ್ರಮಗಳು :

**ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ**

1. ಯುವನಿಧಿ ಪ್ಲಸ್: ಯುವನಿಧಿ ಯೋಜನೆಯಡಿ ನೋಂದಣಿಗೊಂಡಿರುವ ಫಲಾನುಭವಿಗಳಿಗೆ ಕೌಶಲ್ಯದೊಂದಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ವೃತ್ತಿಪರ ತರಬೇತಿ ನೀಡುವುದು.

2. Industry linkage Cell (ILC)), Future Skills: ಯುವನಿಧಿ ಯೋಜನೆಯಡಿ ನೋಂದಣಿಗೊಂಡಿರುವ ಫಲಾನುಭವಿಗಳಿಗೆ Industry Linkage Cell ಮೂಲಕ ಕೈಗಾರಿಕೆಗಳಲ್ಲಿ ಬೇಡಿಕೆ ಇರುವ ಹಾಗೂ Future Skills ಕೌಶಲ್ಯ ಗಳಿಗೆ ಸಂಬಂಧಿಸಿದ ತರಬೇತಿ ನೀಡುವುದು.

3. ಕಲಿಕೆ ಜೊತೆ ಕೌಶಲ್ಯ: ಉನ್ನತ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಪದವಿ ಕಾಲೇಜುಗಳಲ್ಲಿ ಬಿ.ಎ. ಬಿಕಾಂ, ಬಿಎಸ್ಸಿ ವ್ಯಾಸಂಗ ಮಾಡುತ್ತಿರುವ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಮೂರು ಕ್ರೆಡಿಟ್ ಗಳ 50 ಗಂಟೆಗಳ ಅವಧಿಯ ADOBE Microsoft, Cisco ಮತ್ತು ಇತ್ಯಾದಿ ಕೈಗಾರಿಕಾ ಭಾಗೀದಾರರೊಂದಿಗೆ ಕೌಶಲ್ಯ ತರಬೇತಿಯನ್ನು ನೀಡುವುದು.

4. ನನ್ನ ವೃತ್ತಿ ನನ್ನ ಆಯ್ಕೆ: ವಿದ್ಯಾರ್ಥಿಗಳಿಗೆ ತಮ್ಮ ಆಸಕ್ತಿ ಮತ್ತು ಕೌಶಲ್ಯಗಳಿಗೆ ಅನುಗುಣವಾದ ವೃತ್ತಿಯನ್ನು ಆಯ್ಕೆಮಾಡಲು ಹಾಗೂ ಶಿಕ್ಷಣ, ಉದ್ಯೋಗ ಹಾಗೂ ಉದ್ಯಮಶೀಲತೆಯ ನಡುವಿನ ಸಂಬಂಧವನ್ನು ಅರಿತುಕೊಳ್ಳಲು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಶಿಕ್ಷಣದ ಹಂತದಲ್ಲಿಯೇ ಮಾರ್ಗದರ್ಶನ ನೀಡುವುದು.

5. ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ : ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಅಸಂಘಟಿತ ಮಹಿಳಾ ಅಭ್ಯರ್ಥಿಗಳಿಗೆ ಕೌಶಲ್ಯಾಧಾರಿತ ತರಬೇತಿಯನ್ನು ನೀಡಲಾಗಿದೆ.

6. ಆಶಾ ದೀಪ ಯೋಜನೆ : ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸಂಘದ ಆಶಾದೀಪ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿಯನ್ನು ನೀಡಲಾಗಿದೆ.

7. ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ: ಸಮಾಜ ಕಲ್ಯಾಣ ಇಲಾಖೆಯ ಆದೇಶದ ಪ್ರಕಾರ SKE 125 STP 2019, ಬೆಂಗಳೂರು ದಿನಾಂಕ : 16.10.2019, ರಾಜ್ಯದ ಪರಿಶಿಷ್ಟ ಪಂಗಡಗಳ ಹಿತದೃಷ್ಟಿಯಿಂದ 2017-18ನೇ ಸಾಲಿಗೆ ವಿಶೇಷ ಕೇಂದ್ರ ನೆರವು (SCA) ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ನೀಡಲಾಗಿದೆ.

8. ಸ್ತ್ರೀ ಶಕ್ತಿ ಯೋಜನೆ : ವಿಶೇಷವಾಗಿ ಸ್ವ-ಸಹಾಯ ಗುಂಪುಗಳ (SHGs) ಮಹಿಳೆಯರಿಗೆ ವಿನ್ಯಾಸಗೊಳಿಸಲಾದ ಕೌಶಲ್ಯ ತರಬೇತಿ ಕಾರ್ಯಕ್ರಮವಾಗಿದ್ದು, ಅವರನ್ನು ಹೊಸ ಕೌಶಲ್ಯಗಳೊಂದಿಗೆ ಸಬಲೀಕರಣಗೊಳಿಸುವ ಮತ್ತು ಅವರ ಆರ್ಥಿಕ ಸ್ವಾತಂತ್ರ್ಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

9: PMAJAY ಯೋಜನೆ : ಪರಿಶಿಷ್ಟ ಜಾತಿ ಸಮುದಾಯದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಉದ್ಯೋಗಾವಕಾಶ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನಮಟ್ಟ ಸುಧಾರಣೆಗೆ ಅನುಕೂಲಕರವಾದ ಸಹಾಯ ಹಾಗೂ ಸಬಲೀಕರಣ ಕಾರ್ಯಕ್ರಮಗಳನ್ನು ಒದಗಿಸುವುದು.

10. Skill on Wheels: ರಾಜ್ಯದ ಗ್ರಾಮಾಂತರ ಪ್ರದೇಶದ (Remote Area) ಯುವಜನತೆಗೆ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮವನ್ನು Mobile Training Centre ಮುಖಾಂತರ ನೀಡುವುದು ಮುಖ್ಯ ಉದ್ದೇಶವಾಗಿರುತ್ತದೆ.

ಕೇಂದ್ರ ಸರ್ಕಾರದ ಯೋಜನೆ / ಕಾರ್ಯಕ್ರಮಗಳು:

1. (SANKALP) (Skill Acquisition and Knowledge Awareness for Livelihood Promotion): ಈ ಕಾರ್ಯಕ್ರಮವು ಕೇಂದ್ರ ಸರ್ಕಾರದ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ (MSDE) ಅಡಿಯಲ್ಲಿ ವಿಶ್ವಬ್ಯಾಂಕ್ ಬೆಂಬಲಿತ ಕಾರ್ಯಕ್ರಮವಾಗಿದೆ. 2018 ರಲ್ಲಿ ಪ್ರಾರಂಭವಾದ SANKALP, ವಿಕೇಂದ್ರೀಕೃತ ಯೋಜನೆ, ವರ್ಧಿತ ಗುಣಮಟ್ಟದ ತರಬೇತಿ ಮತ್ತು ಉದ್ಯಮ ಜೋಡಣೆಯ ಮೂಲಕ ಭಾರತದಲ್ಲಿ ಕೌಶಲ್ಯ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಈ ಕಾರ್ಯಕ್ರಮವು ಸಾಂಸ್ಥಿಕ ಬಲವರ್ಧನೆ, ಸಾಮರ್ಥ್ಯ ವೃದ್ಧಿ ಸೇರ್ಪಡೆ ಮತ್ತು ಮಾರುಕಟ್ಟೆ-ಚಾಲಿತ ಕೌಶಲ್ಯ ತರಬೇತಿಯ ಮೇಲೆ ಕೇಂದ್ರೀಕರಿಸುತ್ತದೆ.

2. ನಲ್ ಜಲ್ ಮಿತ್ರ: ಈ ಕಾರ್ಯಕ್ರಮದಡಿ ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಸಾಮರ್ಥ್ಯ ನಿರ್ಮಾಣ (Capacity building) ಘಟಕದ ಅಡಿಯಲ್ಲಿ ಕೌಶಲ್ಯ ಕಾರ್ಯಪಡೆಯನ್ನು ರಚಿಸಲು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪೈಪ್‌ಲೈನ್ ನೀರು ಸರಬರಾಜು ವ್ಯವಸ್ಥೆಗಳ ಸಮರ್ಥ ಕಾರ್ಯಾಚರಣೆಗಳು ಮತ್ತು ನಿರ್ವಹಣೆಗಾಗಿ (Operations and Management) ಗ್ರಾಮ ಪಂಚಾಯತ್‌ಗೆ ನಿಯೋಜಿಸಲು ನಲ್ ಜಲ್ ಮಿತ್ರ ಕಾರ್ಯಕ್ರಮದಡಿ ಮಹಿಳಾ ಸ್ವ-ಸಹಾಯ ಸಂಘದ ಅಭ್ಯರ್ಥಿಗಳಿಗೆ, ಕೊಳಾಯಿ (Plumbing), ವಿದ್ಯುತ್ ಕೆಲಸ (Electrical) ಮತ್ತು ಉಪಕರಣ ಹಾಗೂ ಯಂತ್ರೋಪಕರಣ ರಿಪೇರಿ ಕುರಿತು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.

Padma. S

(ಪದ್ಮ.ಎಸ್)

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು

ಜೀವನೋಪಾಯ ಇಲಾಖೆ

